ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಸಂಪರ್ಕ ಶಿಕ್ಷಣ ವಿದ್ಯಾಲಯ
Examination G.A.D. Section
ಪರೀಕ್ಷಾ ಸಾಮಾನ್ಯ ಆಡಳಿತ ವಿಭಾಗ
Pavate Nagar, Dharwad
ಪಾವಟೆನಗರ, ಧಾರವಾಡ
"NAAC Accredited with "A" Grade 2022"
Tel Ph No. 0836-2215267
Website : www.kud.ac.in

ನಂ. ಕ.ವಿ.ವಿ/ಪರೀಕ್ಷಾ/ಜಿಎಡಿ/130826/2026/ 706 ದಿನಾಂಕ: 31/08/2026

# ಅಧಿಸೂಚನೆ

## (ಅಗತ್ಯವಾಗಿ ಗಮನಿಸಬೇಕಾದ ಸೂಚನೆಗಳು)

ಮಾರ್ಚ 2026 ರಲ್ಲಿ ಜರುಗಿದ ಬಿ.ಎ./ಬಿ.ಕಾಂ. ಭಾಗ-1, 2, 3 ರ ಪದವಿಗಳ ಮುಖ್ಯ ಪರೀಕ್ಷೆಗೆ ಹಾಜರಾದ "ಸಂಪರ್ಕ ಶಿಕ್ಷಣ ವಿದ್ಯಾಲಯದ" ಅಭ್ಯರ್ಥಿಗಳು (ಬಾಹ್ಯ ಪರೀಕ್ಷೆ) ಈ ಕೆಳಗಿನ ಸೂಚನೆಗಳನ್ನು ಗಮನಿಸತಕ್ಕದ್ದು.

### 1) ಅಂಕ ಪಟ್ಟಿಯಲ್ಲಿನ ನ್ಯೂನತೆಗಳನ್ನು ಸರಿಪಡಿಸಲು ಅರ್ಜಿ:

| ಅ.ನಂ. | ಅರ್ಜಿ (ಮೂಲ ಅಂಕಪಟ್ಟಿ ಸಹಿತ) ಸಲ್ಲಿಸುವ ಅವಧಿ ವಿವರ | ಯಾರ ಹೆಸರಿಗೆ ಅರ್ಜಿ ಸಲ್ಲಿಸುವದು |
|---|---|---|
| 1 | ಅಂಕಪಟ್ಟಿಯ ಹೆಸರಿನಲ್ಲಾದ/ಹಿಂದೆ ಪಾಸಾದ ಪರೀಕ್ಷಾ ಅಂಕಗಳ ತಿದ್ದುಪಡಿಗಾಗಿ ನಿಗದಿಪಡಿಸಿದ ಶುಲ್ಕ ಭರಿಸಿ ಅರ್ಜಿ ಸಲ್ಲಿಸುವುದು. | ಕುಲಸಚಿವರು(ಮೌಲ್ಯಮಾಪನ) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-03 |
| 2 | ಯಾವುದೇ ವಿಷಯದ/ವಿಷಯಗಳ ಪರೀಕ್ಷೆ ಹಾಜರಾಗಿದ್ದರೂ ಸಹ "ಗೈರು ಹಾಜರ "Ab" ಎಂದು ನಮೂದಾಗಿದ್ದರೆ, ಅಂಕಪಟ್ಟಿ ತಿದ್ದುಪಡಿಗಾಗಿ ಅರ್ಜಿ ಸಲ್ಲಿಸುವುದು. | |

:ಸೂಚನೆಗಳು:

ಅ) ಪರೀಕ್ಷಾ ಫಲಿತಾಂಶದ ನಂತರ ನೀಡಿರುವ ಅಂಕಪಟ್ಟಿಯಲ್ಲಿ "ಅಭ್ಯರ್ಥಿ ಹೆಸರಿನಲ್ಲಿ Spelling Mistakes ಅಥವಾ ಇತರೇ ಯಾವುದೇ ತಪ್ಪು ಕಂಡುಬಂದಲ್ಲಿ, ತಿದ್ದುಪಡಿಗಾಗಿ ಸೂಕ್ತ ದಾಖಲಾತಿಯೊಂದಿಗೆ ಸಂಪೂರ್ಣ ಮಾಹಿತಿಯನ್ನು ಅರ್ಜಿಯಲ್ಲಿ ಸ್ಪಷ್ಟವಾಗಿ ನಮೂದಿಸಿ ಸಲ್ಲಿಸತಕ್ಕದ್ದು.

ಆ) ಪರೀಕ್ಷೆಗೆ ಹಾಜರಾಗಿದ್ದರೂ ಸಹ, ಯಾವುದೇ ವಿಷಯಕ್ಕೆ ಇಲ್ಲವೇ ವಿಷಯಗಳಿಗೆ "ಗೈರು ಹಾಜರೆಂದು ಪರಿಗಣಿಸಿ. "Ab" ಪರೀಕ್ಷಾ ಫಲಿತಾಂಶವನ್ನು ಅನುತ್ತೀರ್ಣವೆಂದು ಪ್ರಕಟಿಸಿದ್ದರೆ, ಇಲ್ಲವೇ ಯಾವುದೇ ವಿಷಯಕ್ಕೆ ಸಂಬಂಧಿಸಿ ಅಂಕಗಳ ಅಲಭ್ಯತೆಯ ಪ್ರಯುಕ್ತ ಫಲಿತಾಂಶ ತಡೆಹಿಡಿದಿದ್ದರೆ (ಅಂಕಪಟ್ಟಿ ಬದಲಾಗಿ ಬಿಳಿ ಕಾಗದದಲ್ಲಿ ವಿವರ ನಮೂದಿಸಿ ಕಳುಹಿಸಿರುವದನ್ನು ಗಮನಿಸಿ) ಅಂತಹ ಅಭ್ಯರ್ಥಿಗಳು "ಪರೀಕ್ಷೆ ಬರೆದ ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಂದ ಹಾಜರಾತಿಯ ಕುರಿತು ಸೂಕ್ತ ದಾಖಲಾತಿ ಝುರಾಕ್ಸ್ ಪ್ರತಿ ಪಡೆದು" ಫಲಿತಾಂಶದ ತಿದ್ದುಪಡಿಗಾಗಿ ಅರ್ಜಿಯನ್ನು ಸಲ್ಲಿಸುವದು. ಅವಧಿ ಮೀರಿ ಬರುವ ಪ್ರಕರಣಗಳನ್ನು (ಅರ್ಜಿಗಳನ್ನು) ಗಣನೆಗೆ ತೆಗೆದುಕೊಳ್ಳುವುದಿಲ್ಲ.

ಇ) **NCL ಕುರಿತು:** ಬಿ.ಎ./ಬಿ.ಕಾಂ. -3ನ್ನು ಪಾಸಗಿದ್ದರೂ ಸಹ ಬಿ.ಎ./ಬಿ.ಕಾಂ. -ಭಾಗ 1 ಮತ್ತು 2 ರಲ್ಲಿ ಪಾಸಾದ ಅಂಕಪಟ್ಟಿ ಲಗತ್ತಿಸದೇ ಇರುವುದರಿಂದ ಫಲಿತಾಂಶವನ್ನು **NCL** ಎಂದು ತಡೆಹಿಡಿದ ಪ್ರಕರಣಗಳಲ್ಲಿ ವಿದ್ಯಾರ್ಥಿಗಳು ಬಿ.ಎ./ಬಿ.ಕಾಂ. -ಭಾಗ 1 2 ಮತ್ತು 3ರ ಎಲ್ಲಾ **(Attempt-wise)** ಅಂಕಪಟ್ಟಿಗಳ ಧೃಡೀಕೃತ ಪ್ರತಿಯನ್ನು ಲಗತ್ತಿಸಿ ಅರ್ಜಿ ಸಲ್ಲಿಸುವುದು.

ಈ) ಪಾಸಿಂಗ್ ಸರ್ಟಿಫಿಕೇಟ್ ಕುರಿತು : ಬಿ.ಎ./ಬಿ.ಕಾಂ. -ಭಾಗ 3 ರಲ್ಲಿ ಪಾಸಾದ ವಿದ್ಯಾರ್ಥಿಗಳು ಪಾಸಾಗಿದ್ದಕ್ಕಾಗಿ **(Passing Certificate)** ಪ್ರಮಾಣ ಪತ್ರವನ್ನು ಪಡೆಯಲು ಅಂತಿಮ ವರ್ಷದ ಅಂಕಪಟ್ಟಿಯ ಪ್ರತಿಯೊಂದಿಗೆ ರೂ. 215/-ಗಳ ಅನಲೈನ್ ಮುಖಾಂತರ ಇಲ್ಲವೆ ಆಫ್ ಲೈನ್ ಚಲನ್ ಮುಖಾಂತರ ಭರಣ ಮಾಡಿ ಅರ್ಜಿಯನ್ನು ಅಧೀಕ್ಷಕರು, ಬಿ.ಎ./ಬಿ.ಕಾಂ. ಭಾಗ 3, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ ಇವರಿಗೆ ಅರ್ಜಿ ಸಲ್ಲಿಸತಕ್ಕದು.

### 2) ಅನುತ್ತೀರ್ಣಗೊಂಡ ವಿದ್ಯಾರ್ಥಿಗಳು ನವ್ಹೆಂಬರ/ಡಿಸೆಂಬರ್ -2026 ರಲ್ಲಿ ಜರುಗುವ ಪರೀಕ್ಷೆಗೆ ಹಾಜರಾಗಲು ಅರ್ಜಿ ಸಲ್ಲಿಸುವ ವಿವರ :

| ಅ. ನಂ | ವಿವರ | ಶುಲ್ಕ ರೂ. | ಕೊನೆಯ ದಿನಾಂಕ | ತುಂಬಿದ ಅರ್ಜಿ ಸಲ್ಲಿಸುವ ವಿಳಾಸ |
|---|---|---|---|---|
| 1 | ಪರೀಕ್ಷಾ ಶುಲ್ಕ (ಅಂಕಪಟ್ಟಿ/ಅರ್ಜಿ ಸಹಿತ ಮತ್ತು ಅಂಚೆ/ಇತರೇ ವೆಚ್ಚ) | 1464/- | 22-09-2026 | ಕುಲಸಚಿವರು(ಮೌಲ್ಯಮಾಪನ) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-580003 |
| 2 | ದಂಡ ಸಹಿತ ಅರ್ಜಿಯನ್ನು ವಿಭಾಗಕ್ಕೆ ಸಲ್ಲಿಸಲು ಕೊನೆಯ ದಿನಾಂಕ | 300/- | 23-09-2026 ರಿಂದ 07-10-2026 | |
| 3 | ವಿಶೇಷ ದಂಡ ಸಹಿತ ಅರ್ಜಿಯನ್ನು ವಿಭಾಗಕ್ಕೆ ಸಲ್ಲಿಸಲು ಕೊನೆಯ ದಿನಾಂಕ | 500/- | 08-10-2026 ರಿಂದ 22-10-2026 | |

ಪು.ತಿ.ನೋ.

| | |
|---|---|
| | ಸೂಚನೆ: 1) ಬಿ.ಎ./ಬಿ.ಕಾಂ. ಭಾಗ- 2 & 3 ಪ್ರವೇಶಾತಿ ಅರ್ಜಿ ಸಲ್ಲಿಸಲು ಮೇಲ್ಕಾಣಿಸಿದ ದಿನಾಂಕದವರೆಗೆ ದಂಡದ ಮೊತ್ತವನ್ನು ಭರಿಸಿ ಸಲ್ಲಿಸುವುದು. ತದನಂತರ ಪ್ರವೇಶಾತಿ ಪಡೆಯಲು ಕುಲಸಚಿವರು(ಮೌಲ್ಯಮಾಪನ) ಆದೇಶ ಪಡೆದು ಅರ್ಜಿಯನ್ನು ಸಲ್ಲಿಸವುದು.<br>2) ನಿಗದಿ ಪಡಿಸಿದ ದಿನಾಂಕದೊಳಗಾಗಿ ಶುಲ್ಕ ಭರಿಸಿ ಆಯಾ ದಿನಾಂಕದಂದೇ ಅರ್ಜಿಯನ್ನು ವಿಭಾಗಕ್ಕೆ ಸಲ್ಲಿಸುವುದು. ಅಂತಿಮ ದಿನಾಂಕದ ನಂತರ ಯಾವುದೇ ಅರ್ಜಿ ವಿತರಿಸುವುದಿಲ್ಲ/ಸ್ವೀಕರಿಸುವುದಿಲ್ಲ.<br>3) ಪರೀಕ್ಷಾ ವೇಳಾಪಟ್ಟಿಯನ್ನು ವಿಶ್ವವಿದ್ಯಾಲಯದ ವೆಬಸೈಟ್ **www.kud.ac.in** ನಲ್ಲಿ ನವೆಂಬರ್ 2026 ನೇ ತಿಂಗಳಿನಲ್ಲಿ ಗಮನಿಸಬಹುದು. |

3) ಶುಲ್ಕ ಪಾವತಿ ವಿಧಾನ **(Mode of Remittance of Fees):**

ಅ) **On Line: 2025-26** ನೇ ಸಾಲಿನಲ್ಲಿ ಬಿ.ಎ./ಬಿ.ಕಾಂ. ಭಾಗ-1, 2, 3 ರ ಪದವಿಗಳ ಅನುತ್ತೀರ್ಣಗೊಂಡ ವಿಷಯಗಳಿಗೆ ನವ್ಹೆಂಬರ/ಡಿಸೆಂಬರ್ -2026 ರಲ್ಲಿ ಜರುಗುವ ಪರೀಕ್ಷೆಗಳಿಗೆ ಹಾಜರಾಗಲು, ನಿಗದಿಪಡಿಸಿದ ಶುಲ್ಕಗಳನ್ನು **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ** ವ್ಯವಸ್ಥೆ ಮಾಡಿದ ಅನ್‌ಲೈನ **Online** ಮೂಲಕ ಮಾತ್ರ ಭರಣ ಮಾಡಲು ಸೂಚಿಸಲಾಗಿದೆ. ಇದಕ್ಕಾಗಿ ಸಂಪರ್ಕ ಶಿಕ್ಷಣ ವಿದ್ಯಾಲಯಕ್ಕೆ ಸಂಭಂದಿಸಿದ **www.kud.ac.in** ವೆಬ್ ಸೈಟ್ ನ್ನು ಸಂಪರ್ಕಿಸಿ, **On Line Payment** ಎನ್ನುವ ಕಾಲಂಗೆ ಕ್ಲಿಕ್ ಮಾಡಿದಾಗ **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ SBI COLLECT** ನ್ನು ಆಯ್ಕೆ ಮಾಡಿಕೊಂಡ ನಂತರ **Fees Remittance Receipt** ನಲ್ಲಿನ ಕಾಲಂಗಳನ್ನು ತುಂಬುತ್ತಾ ಹೋಗಬೇಕು. ಈ ರಶೀದಿಯಲ್ಲಿಯ ಕಾಲಂಗಳನ್ನು ಭರ್ತಿ ಮಾಡಿದ ನಂತರ Online ಮುಖಾಂತರ ಶುಲ್ಕ ಭರಣ ಮಾಡಬೇಕು. ಶುಲ್ಕ ಪಾವತಿ ಮಾಡಿದ **Receipt** ನ 2 ಪ್ರತಿಗಳನ್ನು ಪ್ರಿಂಟ್ ಮಾಡಿಕೊಂಡು ಒಂದನ್ನು ಅರ್ಜಿ ಜೊತೆಗೆ ಲಗತ್ತಿಸುವುದು ಹಾಗೂ ಒಂದು ಪ್ರತಿಯನ್ನು ತಮ್ಮ ಹತ್ತಿರ ಮಾಹಿತಿಗಾಗಿ ಇಟ್ಟುಕೊಳ್ಳಲು ಸೂಚಿಸಲಾಗಿದೆ. **ದಿನದ 24 ಗಂಟೆಗಳಲ್ಲಿ ಅನ್ ಲೈನ ಮೂಲಕ ಶುಲ್ಕ ಭರಣ್ ಮಾಡುವ ಅವಕಾಶವಿರುತ್ತದೆ.**

ಆ) **Off Line** ಒಂದು ವೇಳೆ **Online** ಮುಖಾಂತರ ಶುಲ್ಕ ಪಾವತಿ ಮಾಡಲು ತಾಂತ್ರಿಕ ಕಾರಣಗಳಿಂದ ಸಾಧ್ಯವಾಗದಿದ್ದರೆ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಇವರು **www.kud.ac.in** ನಲ್ಲಿ **Off Line** ನಲ್ಲಿ ಅಳವಡಿಸಿರುವ ಚಲನವನ್ನು ಭರ್ತಿಮಾಡಿ ಈ ಚಲನ್ನಿನ ಎರಡು ಪ್ರತಿಗಳನ್ನು ಪ್ರಿಂಟ್ ಮಾಡಿಕೊಂಡು ತಮ್ಮ ಹತ್ತಿರವಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕನಲ್ಲಿ ಹಣ ಪಾವತಿಸಿ ಬ್ಯಾಂಕನಿಂದ ಚಲನಗಳನ್ನು ಮರಳಿ ಪಡೆದು ಅರ್ಜಿಯ ಜೊತೆಗೆ ಲಗತ್ತಿಸತಕ್ಕದ್ದು.

**4) ಪರೀಕ್ಷಾ ಸುಧಾರಣೆಗೆ ಅರ್ಜಿ ಸಲ್ಲಿಸುವ ಕುರಿತು: ಬಿ.ಎ./ಬಿ.ಕಾಂ. ಭಾಗ-1, 2, ಮತ್ತು 3 ನ್ನು ಪಾಸಾದ ನಂತರ 5 ವರ್ಷದ ಒಳಗಡೆ** ಮಾತ್ರ ಪರೀಕ್ಷಾ ಸುಧಾರಣೆಗೆ ಅವಕಾಶವಿದ್ದು ಇದಕ್ಕೆ ಸಂಬಂಧಿಸಿದ ನಿಯಮಾವಳಿಗಳನ್ನು ಗಮನಿಸಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬೇಕು. ಬಿ.ಎ./ಬಿ.ಕಾಂ. ಭಾಗ-3 ನ್ನು ಪಾಸಾದ ವಿದ್ಯಾರ್ಥಿಗಳು ಮೂರು ವರ್ಷ ಅವಧಿಯಲ್ಲಿ **(Three attempts)** ಶ್ರೇಣಿ ಸುಧಾರಣೆ **(Improvement)** ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಇದಕ್ಕಾಗಿ ಕರ್ನಾಟಕ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗವನ್ನು ಖುದ್ದಾಗಿ ಸಂಪರ್ಕಿಸಿ ಅರ್ಜಿ ಸಲ್ಲಿಸುವುದು.

**ಸೂಚನೆ:**

**ಅನುತ್ತೀರ್ಣಗೊಂಡ ವಿಷಯಗಳಿಗಾಗಿ ಪರೀಕ್ಷೆಗಳು:** ಅಂದಾಜು ನವ್ಹೆಂಬರ/ಡಿಸೆಂಬರ್-2026 ರ ತಿಂಗಳಿನಲ್ಲಿ ಪರೀಕ್ಷೆಗಳು ಜರುಗಲಿದ್ದು ಪರೀಕ್ಷಾ ವೇಳಾಪಟ್ಟಿಯನ್ನು ವಿಶ್ವವಿದ್ಯಾಲಯದ ಅಂತರಜಾಲ www.kud.ac.in ನಲ್ಲಿ **ನವೆಂಬರ್** 2026 ನೇ ತಿಂಗಳಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ:0836-2215267 ಗೆ ಸಂಪರ್ಕಿಸಿ ಪರೀಕ್ಷಾ ವೇಳಾಪಟ್ಟಿಯ ಮಾಹಿತಿ ಪಡೆಯಬಹುದು.

29/9/2026

**ಕುಲಸಚಿವರು(ಮೌಲ್ಯಮಾಪನ)**

ಪ್ರತಿಗಳು ಮಾಹಿತಿಗಾಗಿ:

1) ಹಣಕಾಸು ಅಧಿಕಾರಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2) ನಿರ್ದೇಶಕರು ಮಾಹಿತಿ ತಂತ್ರಜ್ಞಾನ ವಿಭಾಗ ಕ.ವಿ.ವಿ. ಧಾರವಾಡ. (ಸದರಿ ಮಾಹಿತಿಯನ್ನು ಅಂತರ್ಜಾಲದಲ್ಲಿ ವಿತರಿಸುವುದು)
3) ಸಿಸ್ಟಮ್ ಅನಾಲಿಸ್ಟ್, ಗಣಕ ಯಂತ್ರ ವಿಭಾಗ(ಪರೀಕ್ಷಾ) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
4) ಉಪಕುಲಸಚಿವರು/ಸಹಾಯಕ ಕುಲಸಚಿವರ, ಪರೀಕ್ಷಾ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
5) ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌಲ್ಯಮಾಪನ) ಇವರ ಆಪ್ತಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
6) ಅಧೀಕ್ಷಕರು ವಾಣಿಜ್ಯ/ಕಲಾ ಭಾಗ-1, 2, 3, ಪರೀಕ್ಷಾ ವಿಭಾಗ ಕ.ವಿ.ವಿ. ಧಾರವಾಡ.
7) ಎಲ್ಲ ದಿನ ಪತ್ರಿಕೆಗಳ ಸಂಪಾದಕರಿಗೆ/ವರದಿಗಾರರಿಗೆ ಮಾಹಿತಿಗಾಗಿ ಹಾಗೂ ಸುದ್ದಿ ಮಾಧ್ಯಮದಡಿ ಪ್ರಕಟಿಸುವ ಕೃಪೆಗಾಗಿ ವಿನಂತಿಯೊಂದಿಗೆ ರವಾನಿಸಲಾಗಿದೆ.